# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಸ್ಪೇಷಲ್ ಕೇಸ್ ನಂ. 25/2020

**ಸಾಕ್ಷಿಯ ಹೆಸರುಃ** ದೇವಿದರ್ಶನ್ **ದೋ.ಸಾ. : 06** **ಪ್ರಾ.ಸಾ. : 03**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ.ಟಿ.ಎನ್ ವಕೀಲರಿಂದ</u>**

3. ನನ್ನ ಊರಾದ ತೆಂಗಿನಗುಂಡಿ ಘಟನಾ ಸ್ಥಳದಿಂದ 12 ಕಿ.ಮೀ ದೂರದಲ್ಲಿರುತ್ತದೆ. ಈ ದಿನ ಚಾಸಾ-1 ರವರು ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ಅವರೇ ನನ್ನನ್ನು ಹಾಗೂ ಪ್ರಾಸಾ-2 ರವರನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಚಾಸಾ-1 ರವರ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಚಾಸಾ-1 ರವರ ಪ್ರಕರಣಕ್ಕೆ ಅನುಕೂಲವಾಗುವಂತೆ ಸಾಕ್ಷ್ಯ ನುಡಿಯದಿದ್ದರೇ ನನ್ನ ಹೆಂಡತಿಯ ಕೆಲಸ ಹೋಗುತ್ತದೆ ಎಂದು, ಈ ದಿನ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಚಾಸಾ-1 ರವರು ಕೆಲಸ ನೀಡಿದ್ದಾರೆ ಎಂಬ ಹಂಗಿನಿಂದಾಗಿ, ಚಾಸಾ-1 ರವರಿಗೆ ಅನುಕೂಲವಾಗುವಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 06-01-2020 ರಂದು ಘಟನಾ ಸ್ಥಳದಲ್ಲಿ ನನಗೆ ಯಾವುದೇ ಕೆಲಸ ಇರಲಿಲ್ಲ ಎಂದರೆ ಸರಿ. ನಾನು ಆ ದಿನ ಸ್ಥಳಕ್ಕೆ ಹೋಗಿದ್ದೆ ಎಂದು ಬಾಯಿ ಮಾತಿನ ಹೇಳಿಕೆಯ ಹೊರತು ಬೇರೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ದಿಃ 06-01-2020 ರಂದು ಘಟನಾ ಸ್ಥಳಕ್ಕೆ ಹೋಗಿದ್ದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ಘಟನಾ ಸ್ಥಳದಲ್ಲಿ ಚಾಸಾ-1, 4, 5 ಮತ್ತು 7 ರವರು ಹಾಜರಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಆರೋಪಿಗಳು 08-45 ಗಂಟೆಗೆ ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಡಿಲ್ ಗ್ರಾಮದ ಅಂಗನವಾಡಿ ಬಳಿಯ ಘಟನಾ ಸ್ಥಳಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಘಟನಾ ಸ್ಥಳದ ಸರ್ವೆ ನಂಃ 99 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುವಂತಹ ಘಟನಾ ಸ್ಥಳದಲ್ಲಿ ಆರೋಪಿಗಳಿಗೆ ಸಂಬಂಧಿಸಿದ ಯಾವುದೇ ಜಾಗ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

4. ದಿಃ 06-01-2020 ರಂದು ಹಡಿಲ್ ಅಂಗನವಾಡಿ ಬಳಿ ಚಾಸಾ-7 ರವರು ಯಾವುದೇ ಪಾಯ ತೆಗೆಯುತ್ತಿರಲಿಲ್ಲ, ಆ ದಿನ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ, ಅದೇ ರೀತಿ ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಜಾತಿ ನಿಂದನೆ ಮಾಡಿ, ಅವಾಚ್ಯವಾಗಿ ಬೈದಿಲ್ಲ, ಜೀವ ಬೆದರಿಕೆ ಹಾಕಿಲ್ಲ ಹಾಗೂ ಹಲ್ಲೆ ಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಜೆ.ಸಿ.ಬಿ ವಾಹನಕ್ಕೆ ಕಲ್ಲು ಹೊಡೆದು ಜೆ.ಸಿ.ಬಿ ಯ ಗ್ಲಾಸ್ ಒಡೆದಿಲ್ಲ ಹಾಗೂ ಅವರಿಗೆ ರೂ.45,000/- ಲುಕ್ಸಾನು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಮುದ್ದೆ ಮಾಲು-1 ರಿಂದ 3 ಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-4 ಚಾಸಾ-1 ರವರ ಜೆ.ಸಿ.ಬಿ ಗೆ ಸೇರಿದ್ದಲ್ಲ ಮತ್ತು ಮುದ್ದೆ ಮಾಲು-5 ಚಾಸಾ-1 ರವರ ಕನ್ನಡಕದ ಗಾಜು ಅಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-4 ಮತ್ತು 5 ನ್ನು ಈ ಪ್ರಕರಣಕ್ಕಾಗಿ ಚಾಸಾ-1 ರವರು ಸೃಷ್ಟಿ ಮಾಡಿದ್ದು, ಅದಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಅಲ್ಲಿ ಪೊಲೀಸರು ಬಂದಿರುವುದಿಲ್ಲ. ಚಾಸಾ-1 ರವರು ಸಾಕ್ಷ್ಯ ಹೇಳುವಂತೆ ಹೇಳಿದ ಮೇರೆಗೆ ನಾನು ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಚಾಸಾ-1 ರವರು ನನಗೆ ಆತ್ಮೀಯರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ